**SC No. 34/2018**
**PW-31**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 34/2018

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀನಿವಾಸ ಆರ್. | ಪ್ರಮಾಣ ವಚನ ಮಾಡಿದ ದಿನಾಂಕ: 11.02.2026 |
| ತಂದೆಯ/ಗಂಡನ ಹೆಸರು | ರಾಚನಾಯ್ಕ | |
| ವಯಸ್ಸು | 55 ವರ್ಷ | |
| ವೃತ್ತಿ | Assistant Executive engineer, ಪೌರಾಡಳಿತ ಇಲಾಖೆ, ಚಾಮರಾಜನಗರ ಜಿಲ್ಲಾ ನಗರಾಭಿವೃದ್ಧಿ ಕೋಶ,ಚಾಮರಾಜನಗರ | ಪ್ರಾ.ಸಾಃ 31 |
| ವಾಸ ಸ್ಥಳ | ಮೈಸೂರು | ಚಾ.ಸಾಃ 43 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು *2013* ರಿಂದ *2017* ರವರೆಗೆ ಮೈಸೂರಿನ ಮಹಾನಗರ ಪಾಲಿಕೆಯಲ್ಲಿ ಕಿರಿಯ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 16.03.2016 ರಂದು ನಮ್ಮ ಕಛೇರಿಗೆ ಸಹಾಯಕ ಪೊಲೀಸ್ ಆಯುಕ್ತರು ನಗರ ಅಪರಾಧ ವಿಭಾಗ ಮೈಸೂರು ರವರಿಂದ ಒಂದು ಪತ್ರ ಬಂದಿದ್ದು ಆ ಪತ್ರದ ಪ್ರಕಾರ ಕೃತ್ಯ ನಡೆದ ಸ್ಥಳ ಕ್ಕೆ ಭೇಟಿ ಕೊಟ್ಟು ಆ ಸ್ಥಳ ದ ನಕಾಶೆಯನ್ನು ರಚಿಸಿಕೊಡಲು

ಮನವಿ ಮಾಡಿಕೊಂಡಿದ್ದು ಆ ಪ್ರಕಾರ ಉದಯಗಿರಿ ಪೊಲೀಸ್ ಠಾಣೆಯಿಂದ ಸಿಬ್ಬಂದಿಯೊಬ್ಬರು ಬಂದಿದ್ದು ಅವರು ನನ್ನನ್ನು ವಿನಾಯಕ ಟೀ ಸ್ಟಾಲ್ ಹತ್ತಿರ ಮಳಿಗೆ ನಂಬರ್ 13 ಕ್ಕೆ ಕರೆದುಕೊಂಡು ಹೋಗಿ ಸ್ಥಳ ವನ್ನು ತೋರಿಸಿದ್ದು ನಾನು ಆ ಸ್ಥಳ ವನ್ನು ನೋಡಿ ಸ್ಥಳ ನಕಾಶೆಯನ್ನು ತಯಾರು ಮಾಡಿದ್ದೆನು. ಸ್ಥಳ ನಕಾಶೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ಸ್ಥಳ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ. 54** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು **ನಿಪಿ.54(ಎ)** ಎಂದು ಗುರುತಿಸಲಾಯಿತು. ಸಾಕ್ಷಿದಾರರು ವಲಯ ಆಯುಕ್ತರು, ಮೈಸೂರು ನಗರ ಪಾಲಿಕೆ ಯವರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.55** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :</u>**

ನಾನು ನಿಪಿ-54 ರಲ್ಲಿ ತೊಸೇರಿಸಿರುವಂತಹ ಅಂಗಡಿ ಇರುತ್ತದೆ ಎನ್ನುವ ಬಗ್ಗೆ ನಗರಪಾಲಿಕೆಯಲ್ಲಿ ದಾಖಲೆಗಳು ಇರುತ್ತವೆ. ನಾನು ಸ್ಥಳ ನಕಾಶೆಯನ್ನು ತಯಾರು ಮಾಡುವ ವೇಳೆಯಲ್ಲಿ ನಾನು ಹೋಗಿದ್ದೆ ಎಂದು ಹೇಳುವ ಸ್ಥಳ ದಲ್ಲಿ ಇದ್ದಂತಹ ಅಂಗಡಿಯ ಮಾಲೀಕರು ಇರಲಿಲ್ಲ. ನಿಪಿ-54 ರಲ್ಲಿ ತೋರಿಸಿರುವ ಮಳಿಗೆ ನಂಬರ್ ಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಸಹಾಯಕ ಪೊಲೀಸ್ ಆಯಕ್ತರು ಕೊಟ್ಟಂತಹ ಮನವಿ ಪತ್ರದಲ್ಲಿ ಮಳಿಗೆ ನಂಬರ್ ಹೇಳಿರುತ್ತಾರೆ ಎಂದರೆ ಸರಿ ನಾನು ನಿಪಿ-54 ರಲ್ಲಿ

ಮಳಿಗೆ ನಂಬರ್ ತೋರಿಸಿರುವುದಿಲ್ಲ ಆದರೆ ವಿನಾಯಕ ಟ್ರೇಡರ್ಸ್ ಎಂದು ಹೇಳಿರುತ್ತೇನೆ. ನಾನು ನಿಪಿ-54 ರಲ್ಲಿ ಮಳಿಗೆಗಳ ನಂಬರ್ ಬರೆದಿರುವುದಿಲ್ಲ ಆದರೆ ಮಾಲೀಕರ ಹೆಸರನ್ನು ಬರೆದಿರುತ್ತೇನೆ. ನಾನು ನಿಪಿ-54 ರಲ್ಲಿ ಹೇಳಿರುವಂತಹ ಮಾಹಿತಿ ಪೊಲೀಸರ ಹೇಳಿಕೆಯ ಮೇರೆಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**